ಅನ್ನೋ ಭಕ್ತರ ಸಲಹೆ ಸಣ್ಣ ಸ್ವಾಮಿಗಳಿಗೆ ಪಥ್ಯ ಆಗಲಿಲ್ಲ. ಪತ್ರಕರ್ತರನ್ನೇ ಇಲ್ಲಿಗೆ ಕರೆಸುವಂತೆ ಪಟ್ಟು ಹಿಡಿದರು. ಪತ್ರಕರ್ತರು ಮಠಕ್ಕೆ ಬಂದರೆ ಅವರು ನಿಮ್ಮ ಸ್ಪಷ್ಟೀಕರಣವನ್ನಷ್ಟೇ ಪ್ರಕಟಿಸುವುದಿಲ್ಲ. ಹೊಸಳ್ಳಿಯ ಜನರನ್ನೂ ಮಾತಾಡಿಸಿ ಅವರು ಹೇಳಿದ್ದನ್ನೆಲ್ಲ ಬರೆಯುತ್ತಾರೆ. ಅದರಿಂದ ಮಠಕ್ಕೆ ಇನ್ನಷ್ಟು ಡ್ಯಾಮೇಜಾಗುತ್ತೆ ಅಂತ ಬಿಡಿಸಿ ಹೇಳಿದ ಮೇಲೆ ಅವರೇ ದುರ್ಗಕ್ಕೆ ಹೋಗಿ ಪತ್ರಿಕಾಗೋಷ್ಠಿ ನಡೆಸಲು ಒಪ್ಪಿದರು. ಪತ್ರಕರ್ತರು ಏನು ಕೇಳಿದರೂ ಅವರ ಬಾಯಿ ಮುಚ್ಚಿಸುತ್ತೇನೆ ಎನ್ನುವ ವಿಶ್ವಾಸ ಅವರಲ್ಲಿತ್ತು.

ಈ ಬೆಳವಣಿಗೆಗಳನ್ನು ಊರ ಜನ ತಮಗೆ ತೋಚಿದಂತೆ ಮಾತಾಡಿಕೊಂಡರು. ದುರ್ಗಕ್ಕೆ ಹೋದವರು, ಅರ್ಜಿಕೊಟ್ಟು ಸುಮ್ಮನೆ ಬರದೆ ಘೋಷಣೆ ಕೂಗಿದ್ದು ತಪ್ಪಾಯಿತು ಅಂತ ಕೆಲವರು ಹೇಳಿದರೆ, ಇನ್ನು ಕೆಲವರು ಊರಲ್ಲಿ ಸ್ಕೂಲೊ, ಕಲ್ಯಾಣ ಮಂಟಪವನ್ನೊ ಕಟ್ಟಿಸಿಕೊಡ್ತೀವಿ ಅಂತ ಮುಂದೆ ಬಂದ ಸ್ವಾಮಿಗಳಿಗೆ ನಾವೇ ಅವಮಾನ ಮಾಡಿದಂಗಾಯ್ತು ಅಂತ ಆಕ್ಷೇಪಿಸಿದರು. ಆದರೆ, ಹೋರಾಟ ಸಮಿತಿಯವರು ಗೋಮಾಳ ಪರಭಾರೆ ಆಗುವುದು ಸದ್ಯಕ್ಕೆ ತಪ್ಪಿತು ಅಂತ ಹೇಳಿಕೊಂಡು ಓಡಾಡಿದರು.

★★★

ಪತ್ರಿಕಾಗೋಷ್ಠಿಗೆ ಬಂದ ಪತ್ರಕರ್ತರನ್ನು ನೋಡಿ ಸ್ವಾಮಿಗಳಿಗೆ ಪಿಚ್ಚೆನಿಸಿತು. ಅನೇಕರಿಗೆ ಪತ್ರಕರ್ತರ ಲಕ್ಷಣಗಳೇ ಇಲ್ಲ ಅನ್ನಿಸಿತು. ಕೆಲವರು ವಿಕ್ಷಿಪ್ತ ಮನಃಸ್ಥಿತಿಯ ಬಂಡಾಯಗಾರರಂತೆಯೂ, ಇನ್ನು ಕೆಲವರು ನಿರುದ್ಯೋಗಿಗಳಂತೆಯೂ ಕಾಣಿಸಿದರು.

'ಮೊದಲು ನೀವು ಏನು ಹೇಳಬೇಕು ಅಂತಿದ್ದೀರೊ ಅದನ್ನು ಹೇಳಿ ಸ್ವಾಮೀಜಿ' ಅಂತ ಅವರೇ ವಿನಂತಿ ಮಾಡಿದರು. ಸ್ವಾಮಿಗಳು ಹೇಳಿದ್ದೆಲ್ಲವನ್ನೂ ಶಿಸ್ತಿನ ವಿದ್ಯಾರ್ಥಿಗಳಂತೆ ಬರೆದುಕೊಂಡರು. ಪ್ರಶ್ನೆ ಕೇಳಿ ಅಂದ ಮೇಲೆ ಅವರನ್ನು ನಿಯಂತ್ರಿಸಲು ಆಗಲಿಲ್ಲ. ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ಸ್ವಾಮಿಗಳು ತಡವರಿಸಿದರು.

'ಜಿಲ್ಲೆಯಲ್ಲಿ ಮೊದಲು ಗೋರಕ್ಷಣಾ ಅಭಿಯಾನ ಆರಂಭಿಸಿದ್ದು ನಿಮ್ಮ ಮಠ. ಈಗ ನೀವೇ ಗೋಮಾಳವನ್ನು ಮಠಕ್ಕೆ ಕೊಡಿ ಅಂತ ಕೇಳಬಹುದೇ?' ಅಂತ ಒಬ್ಬ ಕೇಳಿದ.

'ಇಮಾಂ ಸಾಬರಿಗೆ ಮೈಸೂರು ಸರ್ಕಾರ ಕೊಟ್ಟ ಜಮೀನನ್ನು ಕಬಳಿಕೆ ಅಂತ ನೀವು ಅರ್ಜಿಯಲ್ಲಿ ಆರೋಪಿಸಿದ್ದೀರಿ. ದೇಶಕ್ಕಾಗಿ ಜೈಲಿಗೆ ಹೋಗಿ ಬಂದ ಇಮಾಂ ಸಾಬರನ್ನು ಭೂಗಳ್ಳ ಅಂತ ಪರೋಕ್ಷವಾಗಿ ಹೇಳಿ ಅವಮಾನ ಮಾಡಿದ್ದೀರಿ. ಇದು ಸರಿಯೇ?' ಅಂತ ಇನ್ನೊಬ್ಬ ಕೇಳಿದ. ಈ ಎರಡೂ ಪ್ರಶ್ನೆಗಳಿಗೆ ಅವರಲ್ಲಿ ಉತ್ತರ ಇರಲಿಲ್ಲ.

'ನಮ್ಮ ಮಠದ ಸಿಬ್ಬಂದಿ ಅರ್ಜಿ ಟೈಪು ಮಾಡುವಾಗ ಆಗಿರುವ ಲೋಪ ಅದು. ಅದನ್ನು ನಾವು ಸರಿಪಡಿಸುತ್ತೇವೆ' ಅಂದರು. ಇಮಾಂ ಸಾಬರ ಮಗ ಅಪ್ಪನ ಹೆಸರಿನಲ್ಲಿ ಜಮೀನನ್ನು ಇಂಗ್ಲಿಷ್ ಸ್ಕೂಲಿಗೆ ಕೊಡೋಕೆ ಒಪ್ಪಿದ್ದರು ಅಂತ ಸಮಜಾಯಿಷಿ ಕೊಟ್ಟುಬಿಟ್ಟರು!

'ಆ ಜಮೀನಿನಲ್ಲಿ ನಾಲ್ಕು ಸಮಾಧಿಗಳಿವೆಯಂತೆ! ಇಮಾಂ ಸಾಬರ ಮಕ್ಕಳು ಸಮಾಧಿಗಳನ್ನೇಕೆ ನಿಮಗೆ ಕೊಡ್ತಾರೆ. ಅವನ್ನು ತಗಂಡು ನೀವೇನು ಮಾಡ್ತೀರಾ...' ಅನ್ನೋ ಪ್ರಶ್ನೆಗೆ ಉತ್ತರಿಸಲಾಗದೆ ಮೌನಕ್ಕೆ ಜಾರಿದರು. ಉತ್ತರ ಕೊಡಿ ಅಂತ ಒತ್ತಾಯಿಸಿದರೂ ಸ್ವಾಮಿಗಳು ಬಾಯಿ ಬಿಚ್ಚಲಿಲ್ಲ. ಕೊನೆಗೆ ಗೋಮಾಳದ ಜಮೀನು ಕೊಡಿ ಅಂತ ಸರ್ಕಾರಕ್ಕೆ ಕೊಟ್ಟಿರೊ ಅರ್ಜಿಯನ್ನು ಮಠ ಹಿಂದಕ್ಕೆ ಪಡೆಯುತ್ತೆ. ಇಮಾಂ ಸಾಬರ ಮಕ್ಕಳು ಮುಫತ್ತಾಗಿ ಕೊಟ್ಟರೂ ಅವರ ಭೂಮಿ ನಮಗೆ ಬೇಡ ಅಂತ ಹೇಳಿ ಪತ್ರಿಕಾಗೋಷ್ಠಿ ಮುಗಿಸಿ ನಿಟ್ಟುಸಿರುಬಿಟ್ಟರು.

ಸ್ವಾಮಿಗಳಿಗೆ ಆದ ಮುಜುಗರವನ್ನು ನೋಡಿದ ಹಿರಿಯ ಪತ್ರಕರ್ತರೊಬ್ಬರು, 'ನೀವು